MVC.No.285/2024
PW.1

ದಿನಾಂಕ**: 21.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲು</u>**:** ಎದುರುದಾರ ನಂ**.2** ಪರ ಶ್ರೀ**.**ಬಿ**.** ಎಸ್**.** ಕೆ**.** ವಕೀಲರಿಂದ.

ನಾನು ಮೋ.ಸೈಕಲಿನ ಮೇಲೆ ಹುಮನಾಬಾದಿಗೆ ನನ್ನ ಸಹೋದರ ಸೊಸೆಯೊಂದಿಗೆ ಹೋಗುತ್ತಿರುವಾಗ ಹಿಂದಿನಿಂದ ಲಾರಿ ಬಂದು ಅಪಘಾತಪಡಿಸಿರುತ್ತದೆ. ನಾನು ಆಗ ಲಾರಿ ನಂಬರ್ ಆಗಲಿ ಅಥವಾ ಅದರ ಚಾಲಕನ್ನು ನೋಡಿರುವುದಿಲ್ಲ. ಅಪಘಾತದ ಸ್ಥಳದಲ್ಲಿ ಒಂದು ಹೋಟೆಲ್ ಇರುತ್ತದೆ. ಸದರಿ ಹೋಟೆಲ್ ಮಾಲೀಕ ಯಾರು ಇರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಸೊಸೆ ಮತ್ತು ಇನ್ನೊಬ್ಬರು ನನ್ನನ್ನು ರಾಜೇಶ್ವರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಗೆ ಹೋದಾಗ ನನಗೆ ಜ್ಞಾನ ಇರಲಿಲ್ಲ. ನನ್ನ ಸೊಸೆ ಲಾರಿ ನಂಬರ್ ಅಥವಾ ಚಾಲಕನನ್ನು ನೋಡಿದ ಕುರಿತು ನನಗೆ ಗೊತ್ತಿರುವುದಿಲ್ಲ. ನನಗೆ 3-4 ತಾಸು ಪ್ರಜ್ಞೆ ಇರಲಿಲ್ಲ. ಅದೇ ದಿನ ನನ್ನನ್ನು ಬಸವಕಲ್ಯಾಣದ ಮೂಕಾಂಬಿಕಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಆ ನಂತರ ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಎರಡು ದಿನ ಆದ ನಂತರ ನನಗೆ ಸಂಪೂರ್ಣವಾಗಿ ಜ್ಞಾನ ಬಂದಿರುತ್ತದೆ. ಅಪಘಾತದ ಕುರಿತು ಎರಡು ದಿನಗಳಲ್ಲಿ ನಾನು ನನ್ನ ಅಣ್ಣ-ತಮ್ಮಂದಿರಿಗೆ ಅಪಘಾತದ ಕುರಿತು ತಿಳಿಸಿರುವುದಿಲ್ಲ. ಮೋ.ಸೈಕಲ್ ನನ್ನ ಭಾವನಿಗೆ ಸೇರಿದ್ದು ಇರುತ್ತದೆ. ಸದರಿ ದಿನ ನನಗೆ ಮೋ.ಸೈಕಲ್ ಚಾಲನೆ ಮಾಡಲು ಪರವಾನಿಗೆ ಇತ್ತು, ಆದರೆ ಅಪಘಾತದ ಸಮಯದಲ್ಲಿ ಬಿದ್ದಿರುತ್ತದೆ. ಸದರಿ ಮೋ.ಸೈಕಲಿಗೆ ವಿಮೆ ಇತ್ತು. ನಾನು ಸಿ.ಸಿ.ನಂ.546/2024 ರಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ಮೋ.ಸೈಕಲಿಗೆ ವಿಮೆ ಇರುವುದಿಲ್ಲ ಮತ್ತು ನನಗೆ ಮೋ.ಸೈಕಲ್ ಚಾಲನೆ ಮಾಡಲು ಪರವಾನಿಗೆ ಇರುವುದಿಲ್ಲ ಎಂದು ದಂಡ ತುಂಬಿರುತ್ತೇನೆಂದರೆ ಸರಿ. ಘಟನೆ ದಿನ ನಾನೆ ಮೋ.ಸೈಕಲನ್ನು ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುತ್ತೇನೆಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದಾದ ಕಾರಣ ಮತ್ತು ಮೋ.ಸೈಕಲಿಗೆ ವಿಮೆ ಇಲ್ಲದೆ ಇರುವ ಕಾರಣ ಮರು ದಿನ ದೂರುದಾರನೊಂದಿಗೆ ಶಾಮೀಲಾಗಿ ಲಾರಿ ಅಪಘಾತಪಡಿಸಿರುತ್ತದೆಂದು ಸುಳ್ಳು ದೂರು ಸಲ್ಲಿಸಿರುತ್ತದೆಂದರೆ ಸರಿಯಲ್ಲ. ನಾನು ವೈದ್ಯರ ಬಳಿ ಹೋಗಿ ಸುಳ್ಳು ಅಂಗನ್ಯೂನ್ಯತೆ ಪತ್ರ ಪಡೆದುಕೊಂಡು ಬಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು 2021 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನನಗೆ ಪೆನ್ಸನ್ ಇರುವುದಿಲ್ಲ ಎಂದರೆ ಸರಿ. ನಾನು ವೈದ್ಯಕೀಯ ದಾಖಲಾತಿಗಳನ್ನು ಮತ್ತು ಬಿಲ್ಲುಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿರುವಂತೆ ನನಗೆ ಯಾವದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ 21.07.1960 ಎಂದು ಇರುತ್ತದೆ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-